# ಪಾಠ ಕಲಿಸಿದ ಚಿಟ್ಟೆ



ಮಂಜುನಾಥ ಹುಲುಕೊಪ್ಪದ

■ ರಶ್ಮಿ ಆರ್ ಕೋಟ್ಯಾನ್

ಒಂದು ರಾಜ್ಯದಲ್ಲಿ ಶ್ರೀಮಂತ ರಾಜನಿದ್ದ. ಅವನ ಬಳಿ ಎಣಿಸಲಾರದಷ್ಟು ಸಂಪತ್ತಿತ್ತು. ಅವನ ಬಳಿ ಬೆಟ್ಟದಷ್ಟು ಚಿನ್ನ, ಬೆಳ್ಳಿ, ವಜ್ರ ವೈಡೂರ್ಯಗಳಿದ್ದವು. ಅವನಷ್ಟು ಶ್ರೀಮಂತಿಕೆ ನೆರೆಹೊರೆಯ ಬೇರೆ ಯಾವ ರಾಜರ ಬಳಿಯೂ ಇರಲಿಲ್ಲ. ಈ ಅಪಾರ ಸಂಪತ್ತಿನ ಅರಸನಿಗೆ ಇಬ್ಬರು ರಾಜಕುಮಾರಿಯರಿದ್ದರು. ಅವರಲ್ಲಿ ಕಿರಿಯ ರಾಜಕುಮಾರಿ ಬಹಳ ಕೋಪಿಷ್ಟೆ ಹಾಗೂ ಹಟಮಾರಿ ಸ್ವಭಾವದವಳಾಗಿದ್ದಳು.

ಕಿರಿಯ ರಾಜಕುಮಾರಿಯ ಬಳಿ ಪುಟ್ಟ ವಜ್ರದ ಸರವಿತ್ತು. ಅದು ರಾಜಕುಮಾರಿಗೆ ಬಲುಪ್ರಿಯವಾಗಿತ್ತು. ಒಂದು ದಿನ ಹಿರಿಯ ರಾಜಕುಮಾರಿ ಆ ಸರವನ್ನು ಧರಿಸಿದಳೆಂದು ಇವಳು ಕೋಪಗೊಂಡು ರಂಪಾಟ ಮಾಡಿದ್ದಳು. ಹಿರಿಯ ರಾಜಕುಮಾರಿ ಅದನ್ನು ವಾಪಾಸು ನೀಡುವವರೆಗೂ ಊಟ ಬಿಟ್ಟು ಹಟ ಹಿಡಿದಿದ್ದಳು. ಅವಳ ಹಟ ನೋಡಿ ರಾಣಿ ಆ ಸರವನ್ನು ಅವಳ ಅಕ್ಕನಿಂದ ಪಡೆದು ವಾಪಾಸು ನೀಡಿದ್ದಳು. ನಂತರ ಕೋಪದಿಂದ ಮೂರು ದಿನ ತನ್ನ ತಂದೆ, ತಾಯಿ ಹಾಗೂ ಅಕ್ಕನ ಜೊತೆ ಮಾತನಾಡಲಿಲ್ಲ. ಅವಳ ಈ ಮುಂಗೋಪ ಹಾಗೂ ಹಟದ ಸ್ವಭಾವದಿಂದ ರಾಜ ರಾಣಿಗೆ ಬಹಳ ಚಿಂತೆ ಯಾಗಿತ್ತು.

ಒಂದು ದಿನ ರಾಜಕುಮಾರಿ ತನ್ನ ಸ್ನೇಹಿತೆಯರ ಜೊತೆ ಚಿಟ್ಟೆ ಹಿಡಿಯಲೆಂದು ಆ ರಾಜ್ಯದ ಅತೀ ಸುಂದರ ಗುಲಾಬಿ ಹೂದೋಟಕ್ಕೆ ಹೋದಳು. ಹೂದೋಟದಲ್ಲಿ ಬಹಳ ಸುಂದರವಾದ ಚಿಟ್ಟೆಗಳು ಹಾರಾಡುತ್ತಿದ್ದವು. ರಾಜಕುಮಾರಿಯ ಗೆಳತಿಯರು ಚಿಟ್ಟೆ ಹಿಡಿಯಲಾರಂಭಿಸಿದರು. ಆಗಲೇ ಅಲ್ಲಿಗೆ ನೀಲಿ ಬಣ್ಣದ ಬಲುಸುಂದರವಾದ ಚಿಟ್ಟೆಯೊಂದು ಹಾರಾಡುತ್ತಾ ಬಂತು. ರಾಜಕುಮಾರಿ ಗೆಳತಿಯರು ಒಂದು ಕ್ಷಣ ಮೂಕವಿಸ್ಮಿತರಾಗಿ ಅದನ್ನೇ ನೋಡಿದರು. ರಾಜಕುಮಾರಿ ತನಗೆ ಆ ಚಿಟ್ಟೆ ಬೇಕೇಬೇಕೆಂದು ಹೊಂಚುಹಾಕಿ ಅದನ್ನು ಹಿಡಿದಳು. ಇದನ್ನು ನೋಡಿದ ಬೇರೆ ಚಿಟ್ಟೆಗಳು ರಾಜಕುಮಾರಿಯ ಕತ್ತಿನಲ್ಲಿದ್ದ ಸರವನ್ನು ಕಿತ್ತುಕೊಂಡು ಹಾರಿ ಹೋದವು.

ರಾಜಕುಮಾರಿ ಕೋಪಗೊಂಡು ಕೈಯಲ್ಲಿದ್ದ ಚಿಟ್ಟೆಯನ್ನು ಬಿಟ್ಟು ಸರವನ್ನು ಹಿಡಿದ ಚಿಟ್ಟೆಗಳ ಹಿಂದೆ ಓಡಿದಳು. ಸರವನ್ನು ವಾಪಸ್ ನೀಡಲು ಕಿರುಚಾಡಿದಳು. ಆದರೆ ಅದಕ್ಕೆ ಸ್ಪಂದಿಸದ ಚಿಟ್ಟೆಗಳು ಸರವನ್ನು ಬಾವಿಯ ಬಳಿ ಕೊಂಡೊಯ್ದು ಅದರೊಳಗೆ ಎಸೆದವು. ತನ್ನ ಪ್ರೀತಿಯ ಸರವನ್ನು ಕಳೆದುಕೊಂಡ ರಾಜಕುಮಾರಿ ಬಾವಿಯ ಬಳಿ ಕುಳಿತು ಜೋರಾಗಿ ಅಳಲಾರಂಭಿಸಿದಳು. ಆಗ ಆ ನೀಲಿ ಚಿಟ್ಟೆ ರಾಜಕುಮಾರಿಯ ಬಳಿ ಹಾರಾಡುತ್ತಾ ಬಂತು. ಅವಳಿಗೆ 'ರಾಜಕುಮಾರಿ! ನಾವು ಚಿಟ್ಟೆಗಳು ಈ ಜಗತ್ತಿನಲ್ಲಿ ಬದುಕುವುದು ಹೆಚ್ಚೆಂದರೆ ಮೂವತ್ತು ದಿವಸ. ಆ ಭಗವಂತ ನಮಗೆ ಇಷ್ಟು ಚಿಕ್ಕ ಜೀವನ ನೀಡಿದ್ದಾನೆ. ಹಾಗಾಗಿ ಇರುವ ಈ ಪುಟ್ಟ ಅವಧಿಯಲ್ಲಿ ಸಂತೋಷದಿಂದ ಹಾರುತ್ತಾ ಹಾಯಾಗಿ ಜೀವಿಸುತ್ತೇವೆ. ಆದರೆ ನೀನು ಮನುಷ್ಯಳು! ನೂರಾರು ವರ್ಷ ಬದುಕಬಲ್ಲೆ. ಅಷ್ಟು ದೀರ್ಘ ಅವಧಿಯಲ್ಲಿ ಪ್ರಕೃತಿಯ ಸೌಂದರ್ಯವನ್ನು ಸವಿಯುತ್ತಾ ಬದುಕುವುದನ್ನು ಬಿಟ್ಟು ಕೇವಲ ಒಂದು ಸರಕ್ಕಾಗಿ ಅಳುತ್ತಾ ನಿನ್ನ ಜೀವನದ ಅಮೂಲ್ಯ ಕ್ಷಣಗಳನ್ನು ಕಳೆದುಕೊಳ್ಳುತ್ತಿರುವೆಯಲ್ಲಾ? ಹಾಗೆ ಮಾಡಬೇಡ. ನಿನ್ನ ಸುಂದರ ಜೀವನದ ಪ್ರತಿ ಕ್ಷಣವನ್ನೂ ನಮ್ಮ ಹಾಗೆ ಸಂತೋಷದಿಂದ ಆಹ್ವಾನಿಸು. ಕೊನೆಗೊಂದು ದಿನ ಅಂತ್ಯ ಬರಲೇಬೇಕು ಅದು ಬರುತ್ತದೆ. ಆಗ ನಿನ್ನ ಅಮೂಲ್ಯ ಕ್ಷಣಗಳನ್ನು ಕಳೆದುಕೊಂಡೆ ಎಂದು ಪಶ್ಚಾತ್ತಾಪ ಪಡಬೇಡ' ಎಂದು ಬುದ್ಧಿವಾದ ಹೇಳಿತು.

ಚಿಟ್ಟೆಯ ಮಾತುಗಳನ್ನು ಕೇಳಿ ರಾಜಕುಮಾರಿಗೆ ಜ್ಞಾನೋದಯವಾಯಿತು. ತಾನು ಹಿಂದೆ ಊಟ ಬಿಟ್ಟು ಹಟ ಮಾಡಿದ್ದು, ತಾಯಿ ತಂದೆ ಹಾಗೂ ಅಕ್ಕನ ಜೊತೆ ಮೂರು ದಿನ ಮಾತು ಬಿಟ್ಟಿದನ್ನು ನೆನೆದು ಮರುಗಿದಳು. ಮೂವತ್ತು ದಿನ ಬದುಕುವ ಚಿಟ್ಟೆಗಳ ಆಶಾವಾದಿ ಮನೋಭಾವ ಕಂಡು ಆಶ್ಚರ್ಯವಾಯಿತು. ಇಷ್ಟು ಚಿಕ್ಕ ಅವಧಿ ಮಾತ್ರ ಬದುಕುವ ಚಿಟ್ಟೆಗಳನ್ನು ಹಿಡಿದು ನಾನು ಹಿಂಸಿಸಲು ಹೊರಟಿದ್ದೇನಲ್ಲಾ ಎಂದು ಪಾಪಪ್ರಜ್ಞೆ ಮೂಡಿತು. ಕೂಡಲೇ ತನ್ನ ತಪ್ಪಿಗಾಗಿ ಚಿಟ್ಟೆಗಳಲ್ಲಿ ಕ್ಷಮೆಯಾಚಿಸಿ ಗೆಳತಿಯರೊಡನೆ ಅರಮನೆಗೆ ಹಿಂದಿರುಗಿದಳು.

ಅರಮನೆಗೆ ಮರಳಿದ ರಾಜಕುಮಾರಿ ತನ್ನ ತಂದೆ, ತಾಯಿ ಹಾಗೂ ಅಕ್ಕನೊಂದಿಗೆ ಅಂದಿನಿಂದ ಪ್ರೀತಿಯಿಂದ ನಡೆದುಕೊಂಡಳು. ಸರವನ್ನು ಕಳೆದುಕೊಂಡರೂ ಸಂತೋಷದಿಂದಿರುವ ಹಾಗೂ ಬದಲಾದ ತನ್ನ ಮಗಳನ್ನ ಕಂಡು ರಾಜ ರಾಣಿಗೆ ಸಂತಸವೂ ಆಶ್ಚರ್ಯವೂ ಆಯಿತು. ■